ಅರ್ಜಿ ಕೊಟ್ಟಿದ್ದಾರೆ. ಆದರೆ ಅವರಿಗೆ 77 ಲಕ್ಷ ಅನುದಾನವನ್ನು ಕೊಟ್ಟಿದ್ದಾರೆ. ಆದರೆ ಅವರ್ಯಾರೆಂದು ನನಗೆ ಇಲ್ಲಿಯವರೆಗೆ ಗೊತ್ತಾಗಿಲ್ಲ.

ಅಧ್ಯಕ್ಷರು:– ಉತ್ತರ ಹೇಳಿ.

ಶ್ರೀ ಎಸ್.ಎ. ರಾಮದಾಸ್ (ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು):– ಸಮಾಜ ಕಲ್ಯಾಣ ಸಚಿವರಿಗೆ ಬರೆದಂತಹ ಪತ್ರದ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ. ಆದ್ದರಿಂದ, ಮಾನ್ಯ ಸಚಿವರು ಬಂದ ನಂತರ ಉತ್ತರ ಕೊಡಿಸುತ್ತೇವೆ.

ಶ್ರೀ ಹೆಚ್.ಎಸ್. ಪ್ರಕಾಶ್:– ಉತ್ತರವನ್ನು ಯಾರು ಕೊಡುತ್ತಾರೆ?

ಅಧ್ಯಕ್ಷರು:– ಮಾನ್ಯ ಸಮಾಜ ಕಲ್ಯಾಣ ಸಚಿವರು ಇಲ್ಲ. ನಾಳೆ ಮತ್ತೆ ಪ್ರಸ್ತಾಪ ಮಾಡಿ.

7. ವಿಷಯ: ಎರಡನೇ ಹಂತದ ಹುಲಿ ಸಂರಕ್ಷಣಾ ಯೋಜನೆಯನ್ನು ಕೈಬಿಡುವ ಬಗ್ಗೆ.

*****

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ ತಾಲ್ಲೂಕಿನಲ್ಲಿ ಹುಲಿ ಸಂರಕ್ಷಣಾ ಯೋಜನೆಯನ್ನು ಮಾಡುತ್ತಿದ್ದಾರೆ. ಮೊದಲನೇ ಹಂತದಲ್ಲಿ ಕೆಲವು ಊರುಗಳನ್ನು ಅಲ್ಲಿ ಸೇರಿಸಿಕೊಂಡಿದ್ದಾರೆ. ಮತ್ತೆ ಎರಡನೇ ಹಂತದಲ್ಲಿ ಅನೇಕ ಹಳ್ಳಿಗಳು ಸೇರಿಕೊಳ್ಳುತ್ತಿವೆ. ಭದ್ರಾ ಯೋಜನೆಯಲ್ಲಿ ಜಮೀನನ್ನು ಕಳೆದುಕೊಂಡು ಪುನರ್ ವಸತಿ ಪಡೆದುಕೊಂಡವರು ಸಹ ಇದರಲ್ಲಿ ಇದ್ದಾರೆ. ಆದರೆ, ಎರಡನೇ ಹಂತವನ್ನು ಮಾಡುವುದಿಲ್ಲವೆಂದು ಸರ್ಕಾರ ಹೇಳಿಕೆ ಕೊಟ್ಟಿತ್ತು. ಆದರೆ ಇವತ್ತಿನವರೆಗೆ ಅದರ ಆದೇಶ ಬಂದಿಲ್ಲ. ಮೊದಲನೆಯದಕ್ಕೆ ಆದೇಶ ಆಗಿದೆ. ಆದರೆ ಎರಡನೇ ಹಂತಕ್ಕೆ ಆದೇಶ ಮಾಡಿಲ್ಲ. ಅಲ್ಲಿನ ಜನಗಳು ಬಹಳ ಆತಂಕದಿಂದ ಜನವರಿ ತಿಂಗಳಲ್ಲಿ ಚಳುವಳಿ ಮಾಡಿದ್ದಾರೆ. ಅಲ್ಲಿನ ಜನರು ಬಹಳ ಆತಂಕದಿಂದ ಇರುವುದರಿಂದ ಸರ್ಕಾರ ಅದಕ್ಕೆ ಬಹಳ categorical ಆಗಿ statement ಕೊಡಬೇಕು. ಈಗ ಅದನ್ನು

ಮಾಡಿದರೆ ಭದ್ರಾ ಯೋಜನೆಯಲ್ಲಿ ಜಮೀನು ಕಳೆದುಕೊಂಡಿರುವ ಅನೇಕ ಹಳ್ಳಿ ಜನರು ಮತ್ತೆ ಬೀದಿ ಪಾಲಾಗುತ್ತಾರೆ. ಆ ಕಾರಣದಿಂದ ಎರಡನೇ ಹಂತದ ಯೋಜನೆಯನ್ನು ಕೈಬಿಡಬೇಕೆಂದು ಜನರು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದಾರೆ. ದಯವಿಟ್ಟು ಸರ್ಕಾರ ಇದರ ಬಗ್ಗೆ ಸ್ಪಷ್ಟವಾದ ಹೇಳಿಕೆಯನ್ನು ಕೊಡಬೇಕು. ಎರಡನೇ ಹಂತದ ಯೋಜನೆಯನ್ನು ಕೈ ಬಿಟ್ಟಿದ್ದೇವೆಂದು ಹೇಳಬೇಕು ಮತ್ತೆ ಅದರ ಬಗ್ಗೆ ಒಂದು ಆದೇಶವನ್ನು ಹೊರಡಿಸಬೇಕು.

ಅಧ್ಯಕ್ಷರು:– Buffer zone ಗಳನ್ನೆಲ್ಲ ತೆಗೆದುಹಾಕಿ.

ಶ್ರೀ ಡಿ.ಎನ್. ಜೀವರಾಜ್ (ಶೃಂಗೇರಿ):– ಮಾನ್ಯ ಅಧ್ಯಕ್ಷರೆ, ಇದು ನನ್ನ ಕ್ಷೇತ್ರದ ವಿಷಯವಾಗಿರುವುದರಿಂದ ನನಗೆ ಎರಡು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಟ್ಟರೆ ಏನೇನು ಘಟನೆಗಳು ನಡೆಯಿತೆಂದು ವಿವರಿಸುತ್ತೇನೆ. ಹುಲಿ ಸಂರಕ್ಷಣೆ ಯೋಜನೆ ಬೇಕಿತ್ತೋ, ಬೇಡವಾಗಿತ್ತೋ ಗೊತ್ತಿಲ್ಲ. 2007ನೇ ಇಸವಿಯಲ್ಲಿ Tiger Conservation Authority ರವರು ಕರ್ನಾಟಕ ಸರ್ಕಾರಕ್ಕೆ ಒಂದು ಪತ್ರ ಬರೆಯುತ್ತಾರೆ. ಅದಾದ ನಂತರ 2010 ಕ್ಕೆ ಮತ್ತೊಂದು ಪತ್ರ ಬರೆಯುತ್ತಾರೆ. ಕರ್ನಾಟಕ ಸರ್ಕಾರದಿಂದ ಒಂದು ಪ್ರಸ್ತಾವನೆಯು ಹೋಗಬೇಕೆಂಬುದನ್ನು, ಸನ್ಮಾನ್ಯ ಕೇಂದ್ರ ಪರಿಸರ ಸಚಿವರಾದ ಶ್ರೀ ಜಯರಾಮ್ ರಮೇಶ್‌ರವರು ಚಿಕ್ಕಮಗಳೂರಿಗೆ ಮೇ 8ನೇ ತಾರೀಖಿನ ದಿವಸ ಬಂದಿದ್ದಾಗ ಹೇಳಿದ್ದರು. ಮೇ 9ನೇ ತಾರೀಖಿನಂದು ಎಲ್ಲಾ ಪತ್ರಿಕೆಗಳ ಬ್ಯಾನರ್ ಹೆಡ್‌ಲೈನ್‌ನಲ್ಲಿ ಹುಲಿ ಸಂರಕ್ಷಣಾ ಯೋಜನೆಯನ್ನು ವಿಸ್ತೀರ್ಣಗೊಳಿಸುವುದು ಅನಿವಾರ್ಯವಾಗಬಹುದೆಂಬ ಹೇಳಿಕೆಯನ್ನು release ಮಾಡಿದರು. ಅಲ್ಲಿ ಹುಲಿ ಬಿಡುವುದಕ್ಕೆ ಬಂದವರು ಈ ಹೇಳಿಕೆಯನ್ನು ಅಲ್ಲಿ ರಿಲೀಸ್ ಮಾಡಿದರು. ಅದಾದ ನಂತರ ಕರ್ನಾಟಕ ಸರ್ಕಾರ ಏಳು ಹುಲಿ sanctuary ಗಳನ್ನು ಮಾಡಬೇಕೆಂಬ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರದ ಅನುಮೋದನೆಗಾಗಿ ಕಳುಹಿಸಿತು. ಈ ಏಳರಲ್ಲಿ ಭದ್ರಾ ಮತ್ತು ಕುದುರೆಮುಖ ಅಭಯಾರಣ್ಯಗಳೆರಡು ಸೇರಿತ್ತು. ಅದು ಸೇರಿದೆಯೆಂಬ

ವಿಷಯ ನಮ್ಮ ಗಮನಕ್ಕೆ ತಡವಾಗಿ ಬಂತು. ಅಲ್ಲಿರುವಂಥ ಕೆಳಗಿನ ಅಧಿಕಾರಿಗಳು ಇದನ್ನು ಮಾಡಬೇಕಾದರೆ ಜನಸ್ಪಂದನಾ ಕಾರ್ಯಕ್ರಮ ಮತ್ತು ಜನ ಸಂಪರ್ಕ ಸಭೆ ಮಾಡಿ, ಚುನಾಯಿತ ಪ್ರತಿನಿಧಿಗಳನ್ನು ಕರೆದು ಚರ್ಚಿಸಿ ಅನಂತರ ಪಂಚಾಯಿತಿ ಅಭಿಪ್ರಾಯವನ್ನು ತೆಗೆದುಕೊಂಡು ಮಾಡಬೇಕಾದ ಕರ್ತವ್ಯವಿತ್ತು. ಅಧಿಕಾರಿಗಳಿಗೆ ಯಾರನ್ನೂ ಕೇಳಬಾರದು ಎಂದೆನಿಸಿರಬಹುದೇನೋ ಗೊತ್ತಿಲ್ಲ. ಆದ್ದರಿಂದ, ಅವರು ಹಾಗೆ ಕಳುಹಿಸಿದ್ದಾರೆ. ಕೇಂದ್ರ ಸರ್ಕಾರದಿಂದ ಅದಕ್ಕೆ ಅನುಮೋದನೆ ಬರುತ್ತದೆಂಬ ಅನುಮಾನ ನಮ್ಮನ್ನು ಕಾಡುವುದಕ್ಕೆ ಶುರುವಾದಾಗ ಮಾನ್ಯ ಮುಖ್ಯಮಂತ್ರಿಗಳನ್ನು ನಾನು ಮತ್ತು ತರೀಕೆರೆ ಕ್ಷೇತ್ರದ ಮಾನ್ಯ ಸುರೇಶ್‌ರವರು ಭೇಟಿ ಮಾಡಿದ್ದೆವು. ದಿನಾಂಕ 15.10.2011ರಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕೃಷ್ಣಾದಲ್ಲೊಂದು ಸಭೆಯನ್ನು ಕರೆದಿದ್ದರು. ಆ ಸಭೆಯಲ್ಲಿ Chief Secretary, Principal Secretary, Forest Minister ಮತ್ತು ಮಾನ್ಯ ಅನಿಲ್ ಕುಂಬ್ಳೆ ಮತ್ತು ಮಾನ್ಯ ಅನಂತ್ ಹೆಗಡೆರವರು ಕೂಡ ಆ ಸಭೆಯಲ್ಲಿದ್ದರು. ನಾನು ನನ್ನ ಅಭಿಪ್ರಾಯವನ್ನು ಬಹಳ ಸ್ಪಷ್ಟವಾಗಿ ಆ ಸಭೆಯಲ್ಲಿಟ್ಟಿದ್ದೆ. ಶೃಂಗೇರಿ ಕ್ಷೇತ್ರದೊಳಗೆ ಭದ್ರಾ ಅಭಯಾರಣ್ಯವಾಯಿತು. ಭದ್ರಾ ಟೈಗರ್ sanctuary ಆಯಿತು. ಕುದುರೆಮುಖ ಅಭಯಾರಣ್ಯವಾಯಿತು. ಕುದುರೆಮುಖ ಟೈಗರ್ sanctuary ಆಯಿತು. ಭದ್ರಾ ಡ್ಯಾಂ ಆಯಿತು. ತುಂಗಾ ಡ್ಯಾಂ ಆಯಿತು. ಅಪ್ಪರ್ ಭದ್ರಾ ಆಯಿತು. ಅಪ್ಪರ್ ತುಂಗಾ ಆಯಿತು. ಕುವೆಂಪು ಜೈವಿಕ ಅರಣ್ಯವಾಯಿತು. ಇನ್ನೂ ತಡೆದುಕೊಳ್ಳುವುದಕ್ಕೆ ನಮ್ಮ ಕ್ಷೇತ್ರಕ್ಕೆ ಶಕ್ತಿಯಿಲ್ಲ. ದಯವಿಟ್ಟು ಇದು ಬೇಡ ಎಂದು ಹೇಳಿದೆ. ಕುದುರೆಮುಖ ಅರಣ್ಯ ತರುವುದಕ್ಕೆ ಹೋಗಿ ಈ ರಾಜ್ಯಕ್ಕೆ ಬರಬಾರದ ಸಂಕಟವನ್ನು ಕೊಂಡುಕೊಂಡಿದ್ದೀವಿ. ಪಶ್ಚಿಮ ಘಟ್ಟದೊಳಗೆ ಏನೇನು ಘಟನೆಗಳು ನಡೆಯುತ್ತಿದೆ ಎನ್ನುವುದು ಗೊತ್ತಿದೆ. ನಮ್ಮ ಹಾಲು ಕೆಂಪಾಗಿದೆ ಆದರೆ ಬೆಂಗಳೂರಿಗೆ ಬರುವ ಹಾಲು ಬಿಳಿಯಿದೆ. ದಯವಿಟ್ಟು ಇದನ್ನು ಮಾಡಬಾರದೆಂದು ಹೇಳಿದ್ದಕ್ಕೆ, ಇದಕ್ಕೆ notification ಹಾಕಬಾರದೆಂದು

ಮಾನ್ಯ ಮುಖ್ಯಮಂತ್ರಿಗಳು ಸ್ಪಷ್ಟವಾದ ನಿರ್ದೇಶನವನ್ನು ಅವತ್ತು ಕೊಟ್ಟರು. ನಮ್ಮ ದುರಾದೃಷ್ಟ ಕರ್ನಾಟಕ ಸರ್ಕಾರ ಕಳುಹಿಸಿದಂತಹ ಪ್ರಸ್ತಾವನೆಗೆ ಕೇಂದ್ರ ಸರ್ಕಾರ ಅನುಮೋದನೆಯನ್ನು ಕೊಟ್ಟಿತು. ಅನುಮೋದನೆ ಆಗಿ ಬಂದ ನಂತರ ಮಾನ್ಯ ಮುಖ್ಯಮಂತ್ರಿಗಳು ಮತ್ತೊಂದು ಸಭೆ ಮಾಡಿದರು. ಆ ಸಭೆಯಲ್ಲಿ ಭದ್ರಾ ಮತ್ತು ಕುದುರೆಮುಖ ಎರಡನ್ನೂ ಹೊರತುಪಡಿಸಿ ನಾನು ಏನೇನು ಅಂಕಿ ಅಂಶಗಳನ್ನು ಪ್ರಸ್ತಾಪ ಮಾಡಿದ್ದೆ, ಅದೇ ಅಂಶಗಳನ್ನು proceedings ನಲ್ಲಿ ಹಾಕಿದ್ದಾರೆ. ಅದಕ್ಕೆ ನಾನು ಮುಖ್ಯಮಂತ್ರಿಗಳನ್ನು ಮತ್ತು ಸರ್ಕಾರವನ್ನು ಅಭಿನಂದಿಸುತ್ತೇನೆ. ಇವೆರಡನ್ನು ಹೊರತುಪಡಿಸಿ ಇನ್ನುಳಿದಿರುವ ದಾಂಡೇಲಿ, ಮೂಕಾಂಬಿಕಾ, ಕಾವೇರಿ, ಸೋಮೇಶ್ವರ ಮತ್ತು ಬನ್ನೇರುಘಟ್ಟ ಈ ಐದಕ್ಕೆ ಈಗಾಗಲೇ ಅನುಮೋದನೆಯನ್ನು ಕೊಟ್ಟು ಕರ್ನಾಟಕ ಸರ್ಕಾರ ಈಗಾಗಲೇ notification ಹೊರಡಿಸಿದೆ. ಇವೆರಡನ್ನು ಕೈಬಿಟ್ಟಿದ್ದೇವೆಂದು ಹೇಳಿರುವುದು proceedings ನಲ್ಲಿದೆ. ನನಗೆ ಸಂತೋಷಕರವಾದ ಒಂದು ವಿಷಯವೆಂದರೆ ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ನಮ್ಮ ಪರವಾಗಿ ಒಂದು ಧ್ವನಿ ಹಾಕಿದ್ದಾರೆ, ಅವರಿಗೆ ನಾನು ಅಭಿನಂದನೆಯನ್ನು ಹೇಳುತ್ತೇನೆ. ಮಾನ್ಯ ಸಿದ್ದರಾಮಯ್ಯನವರು ನಮ್ಮ ಪರವಾಗಿ ಈ ಪ್ರಶ್ನೆಯನ್ನು ಕೇಳಿರುವುದರಿಂದ ಇದನ್ನು ಕರ್ನಾಟಕ ಸರ್ಕಾರ ಕೈಬಿಟ್ಟಿದೆಯೆಂಬ ಮಾಹಿತಿ ನನ್ನ ಬಳಿಯಿದೆ. ಆ ಮಾಹಿತಿಯನ್ನು ಮಾನ್ಯ ಮಂತ್ರಿಗಳು ಸದನದಲ್ಲಿ ಹೇಳಬೇಕೆಂಬ ಆಸೆ ನಮ್ಮೆಲ್ಲರದ್ದಾಗಿದೆ. ಇದರ ಬಗ್ಗೆ ದೃಢಪಡಿಸಬೇಕೆಂಬ ಆಶಯ ಕೂಡ ಎಲ್ಲರದಾಗಿದೆ. ಇನ್ನು ಮುಂದೆ ಕೂಡ ಇವೆರಡನ್ನೂ permanent ಆಗಿ ಕೈಬಿಟ್ಟಿದ್ದೇವೆಂದು ಹೇಳಬೇಕೆಂಬ ಆಶಯವನ್ನು ನಾವೆಲ್ಲಾ ವ್ಯಕ್ತಪಡಿಸಿದ್ದೇವೆ. ಐದಕ್ಕೆ notification ಆಗಿದೆ. ಇವೆರಡನ್ನೂ ಹೊರತುಪಡಿಸಿ ಎಂದು ಮುಖ್ಯಮಂತ್ರಿಗಳು ಆದೇಶ ಮಾಡಿದ್ದಾರೆ.

ಶ್ರೀ ಸುನಿಲ್ ವಿ. ಹೆಗಡೆ:– ಮಾನ್ಯ ಅಧ್ಯಕ್ಷರೆ, ಜೊಯಿಡಾ ತಾಲ್ಲೂಕಿನಲ್ಲಿ ಹುಲಿ ಅಭಯಾರಣ್ಯ ಎಂದು ಮಾಡಿದ್ದಾರೆ. ಜೊಯಿಡಾ

ತಾಲ್ಲೂಕಿನಲ್ಲಿ ಈಗಾಗಲೇ ಸೂಪಾ ಡ್ಯಾಂ ಮಾಡಿ ಅರ್ಧ ಕಾಲುವೆಗೆ ನೀರು ಹರಿಸುತ್ತಿದ್ದಾರೆ. ಜೋಯಿಡಾ ತಾಲ್ಲೂಕಿನಲ್ಲಿ ನ್ಯಾಷನಲ್ ಪಾರ್ಕ್ ಹಾಗೂ ವೈಲ್ಡ್ ಲೈಫ್ sanctuary ಯೂ ಇದೆ. ಮತ್ತೆ ಈಗ ಟೈಗರ್ sanctuary ಮಾಡಿ ಅಲ್ಲಿನ ಜನರಿಗೆ ಯಾವುದೇ ರೀತಿಯ ಅಭಿವೃದ್ಧಿಯೂ ಆಗುತ್ತಿಲ್ಲ. ರಸ್ತೆ ಮಾಡಲಿಕ್ಕೆ ಆಗುತ್ತಿಲ್ಲ. ಯಾವ ರೀತಿಯಿಂದ ಇದನ್ನೆಲ್ಲಾ ಮಾಡುತ್ತಿದ್ದಾರೆ. ಇಲ್ಲಾ ಅಂದರೆ ಒಂದು ಕೆಲಸ ಮಾಡಲಿ. ಇಡೀ ಜೊಯಿಡಾ ತಾಲ್ಲೂಕನ್ನು ಬೆಂಗಳೂರಿನ ಹತ್ತಿರ shift ಮಾಡಿ ಬಿಡಲಿ. ಜೋಯಿಡಾ ತಾಲ್ಲೂಕಿಗೆ lock ಹಾಕಿ ಬೇಕಾದ್ದನ್ನು ಮಾಡಲಿ. ನಮ್ಮದೇನೂ ತಕರಾರಿಲ್ಲ. ಜೊಯಿಡಾ ತಾಲ್ಲೂಕಿನಲ್ಲಿ ಹುಲಿ ಅಭಯಾರಣ್ಯ ಮಾಡುತ್ತಾರೆ, ಪರಿಹಾರ ಕೊಡುವುದಿಲ್ಲ. ಅವರಿಗೆ ಆಶ್ರಯ ಮನೆಗಳು ಸಿಗುವುದಿಲ್ಲ. ದಯವಿಟ್ಟು ಜೊಯಿಡಾ ತಾಲ್ಲೂಕಿಗೆ ಹುಲಿ ಅಭಯಾರಣ್ಯ ಯೋಜನೆ ಕೈಬಿಡಬೇಕೆಂದು ವಿನಂತಿ ಮಾಡುತ್ತೇನೆ.

ಅಧ್ಯಕ್ಷರು:– ಶ್ರೀ ಕಿಮ್ಮನೆ ರತ್ನಾಕರ್, please ನಾನು ರತ್ನಾಕರ್ ಅವರನ್ನು ಕರೆದಿರುವುದು.

ಶ್ರೀ ಅಶೋಕ್:– ಅಲ್ಲಿ ಹುಲಿ ಸಂಖ್ಯೆ ಬಹಳ ಕಡಿಮೆ ಆಗಿದೆ.

ಶ್ರೀ ಕಿಮ್ಮನೆ ರತ್ನಾಕರ್:– ಮಾನ್ಯ ಸಭಾಧ್ಯಕ್ಷರೆ, ಫೆಬ್ರವರಿ 17, 2011ರ ನೋಟಿಫಿಕೇಷನ್‌ನಲ್ಲಿ ಶಿವಮೊಗ್ಗ ತಾಲ್ಲೂಕು ನನ್ನ ಕ್ಷೇತ್ರದ್ದೂ ಕೂಡ ಅದೇ ರೀತಿ ಆಗಿದೆ. ಕುಂಬೆ, ಬೈಲು, ಕ್ಯಾಂಪು, ತಳಗಿನಸರ, ಈ ಎಲ್ಲಾ ಊರುಗಳೂ ಹುಲಿ ಯೋಜನೆಯಡಿ ಸೇರಿಕೊಂಡಿವೆ. ಸರ್ಕಾರವನ್ನು ನಾನು ಒತ್ತಾಯ ಮಾಡುವುದೇನೆಂದರೆ ಗೆಜೆಟ್ ನೋಟಿಫಿಕೇಷನ್ ಏನಾಗಿದೆ, ಅದನ್ನು withdraw ಮಾಡಬೇಕೆನ್ನುವ ಒತ್ತಾಯವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರುವುದಕ್ಕೆ ನಾನು ಸಮ್ಮತಿ ವ್ಯಕ್ತಪಡಿಸುತ್ತೇನೆ.

ಶ್ರೀ ಎಸ್. ಸುರೇಶ್ ಕುಮಾರ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು):– ಸನ್ಮಾನ್ಯ ಸಭಾಧ್ಯಕ್ಷರೆ, ಕಳೆದ ವರ್ಷ ಆಗಸ್ಟ್‌ನಲ್ಲಿ ಅಂದರೆ 28.8.2011 ರಲ್ಲಿ ಒಟ್ಟು 8 ವನ್ಯ ಧಾಮಗಳನ್ನು ಹುಲಿ ಸಂರಕ್ಷಣಾ

ಯೋಜನೆಯಲ್ಲಿ ತರಬೇಕೆಂದು ಒಂದು ಪ್ರಸ್ತಾಪ ಬಂದಿತ್ತು. ಬನ್ನೇರುಘಟ್ಟ, ಕುದುರೆಮುಖ, ಮೂಕಾಂಬಿಕಾ ವನ್ಯಧಾಮ, ಸೋಮೇಶ್ವರ ವನ್ಯಧಾಮ, ಕಾವೇರಿ ವನ್ಯಧಾಮ, ಭದ್ರಾ ಈ ರೀತಿಯಾಗಿ ಬಂತು.

ಅಧ್ಯಕ್ಷರು:– ಕಾವೇರಿ ಎಂದರೆ ಎಲ್ಲಿ?

ಶ್ರೀ ಎಸ್. ಸುರೇಶ್ ಕುಮಾರ್:– ಅದು ಲಿಸ್ಟ್‌ನಲ್ಲಿ ಬಂದಿತ್ತು. ಪುಷ್ಪಗಿರಿಯನ್ನು ಮೊದಲನೇ ಹಂತದಲ್ಲಿಯೇ ಕೈಬಿಟ್ಟರು. 27.12.2011ರಂದು ಮಾನ್ಯ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಅರಣ್ಯ ಸಚಿವರ ಅನುಮೋದನೆಯೊಂದಿಗೆ ಅಧಿಸೂಚನೆ ಹೊರಡಿಸಲಾಯಿತು. ಅದರ ಪ್ರಕಾರ ಭದ್ರಾ ಹಾಗೂ ಕುದುರೆಮುಖವನ್ನು ಹೊರತುಪಡಿಸಿ ಬೇರೆ ಪ್ರಸ್ತಾಪಗಳಿಗೆ ಅಧಿಸೂಚನೆಯನ್ನು ಹೊರಡಿಸಿದ್ದಾರೆ. ಅಧಿಕೃತವಾದ ಅಧಿಸೂಚನೆಯನ್ನು ಇನ್ನು ಸ್ವಲ್ಪ ಹೊತ್ತಿನಲ್ಲಿಯೇ ನಿಮಗೆ ತಲುಪಿಸುತ್ತೇನೆ. ಯಾವುದೇ ಕಾರಣದಿಂದ ಭದ್ರಾ ಮತ್ತು ಕುದುರೆಮುಖ ರಾಷ್ಟ್ರೀಯ ಉದ್ಯಾನವನವನ್ನು ಹುಲಿ ಸಂರಕ್ಷಣಾ ವ್ಯಾಪ್ತಿಯಲ್ಲಿ ತರುವುದಿಲ್ಲ. ಇದು ಸರ್ಕಾರದ ನಿಲುವು. ಸರ್ಕಾರ ಹೊರಡಿಸಿರುವ ಅಧಿಸೂಚನೆಯನ್ನು ತಮಗೆ ತಲುಪಿಸುತ್ತೇನೆ.

ಶ್ರೀ ಅಪ್ಪಚ್ಚು ರಂಜನ್:– ಅಧ್ಯಕ್ಷರೆ, ಕಾವೇರಿ ಎಂದು ಓದಿದ್ದಾರೆ. ಕಾವೇರಿ ಎಂದರೆ ಯಾವ ಅಭಯಾರಣ್ಯ ಎಂದು clear ಮಾಡಬೇಕು. Forest Minister ಬಂದಿದ್ದಾರೆ.

ಅಧ್ಯಕ್ಷರು:– ಕಾವೇರಿ ಎಂದರೆ ಎಲ್ಲಿ, ಕಾವೇರಿ wild life area ಎಲ್ಲಿ ಅದು?

ಶ್ರೀ ಸಿದ್ದರಾಮಯ್ಯ:– ಅವರಿಗೆ ಗೊತ್ತಿದ್ದರೆ ತಾನೇ ಹೇಳುವುದು. ಪಾಪ, ಅವರಿಗೆ ಗೊತ್ತಿಲ್ಲ. ಅವರು ಬಂದ ತಕ್ಷಣ ಸುಮ್ಮನೆ ಕೇಳಿದರೆ ಹೇಗೆ?

ಶ್ರೀ ಅಪ್ಪಚ್ಚು ರಂಜನ್:– ನೋಟಿಫಿಕೇಷನ್‌ನಲ್ಲಿರುವ ಕಾವೇರಿ ಅಭಯಾರಣ್ಯ ಎಂದು ಹೇಳಿದ್ದಾರೆ. Tiger Project ಗೆ ಸಂಬಂಧಿಸಿದಂತೆ ಕಾವೇರಿ ಅಭಯಾರಣ್ಯ ಎಂದರೆ ಯಾವುದು?

ಅಧ್ಯಕ್ಷರು:– ಕಾವೇರಿ Tiger Project ಎಲ್ಲಿ ಎಂದು ಕೇಳುತ್ತಿದ್ದಾರೆ.

ಶ್ರೀ ಎಸ್. ಸುರೇಶ್ ಕುಮಾರ್:– ನಾಲ್ಕು ದಿನಗಳಲ್ಲಿ ಕೊಡುತ್ತೇವೆ.

ಶ್ರೀ ಅಪ್ಪಚ್ಚು ರಂಜನ್:– ದಯವಿಟ್ಟು Forest Minister ರವರು clarification ಮಾಡಬೇಕು.

ಶ್ರೀ ಎಸ್. ಸುರೇಶ್ ಕುಮಾರ್:– ಅವರು settle ಆಗಲಿ.

5. ಗೈರು ಹಾಜರಿಗೆ ಅನುಮತಿ

ವಿಷಯ: ಸದಸ್ಯರಾದ ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ ಅವರಿಗೆ ಚಿಕಿತ್ಸೆಯ ಸಲುವಾಗಿ ಅಧಿವೇಶನಕ್ಕೆ ಗೈರು ಹಾಜರಾಗಲು ಅನುಮತಿ ನೀಡುವ ಬಗ್ಗೆ.

ಅಧ್ಯಕ್ಷರು:– ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ ಅವರು ಬರೆದ ಪತ್ರವು ನನಗೆ ಬಂದಿದ್ದು, ಅದು ಈ ರೀತಿ ಇದೆ;

"ವಿಧಾನಸಭಾ ಸದಸ್ಯರಾದ ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ ಅವರು, ಇತ್ತೀಚೆಗೆ ನಡೆದ ರಸ್ತೆ ಅಪಘಾತದಲ್ಲಿ ಗಾಯಗೊಂಡಿರುವ ಪ್ರಯುಕ್ತ, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಹಿನ್ನೆಲೆಯಲ್ಲಿ, ದಿನಾಂಕ 30.01.2012 ರಿಂದ ನಡೆಯಲಿರುವ ಅಧಿವೇಶನಕ್ಕೆ ಗೈರುಹಾಜರಾಗಲು ಅನುಮತಿಯನ್ನು ಕೋರಿ ಪತ್ರವನ್ನು ನೀಡಿರುತ್ತಾರೆ"

ಮಾನ್ಯ ಸದಸ್ಯರು, ಸದನಕ್ಕೆ ಪ್ರಸ್ತಾಪಿತ ಅವಧಿಯಲ್ಲಿ ಗೈರು ಹಾಜರಾಗಲು ಸದನದ ಸಹಮತಿ ಇದೆ ಎಂದು ಭಾವಿಸಲಾಗಿದೆ.

(ಸದನವು ಮಾನ್ಯ ಸದಸ್ಯರ ಗೈರು ಹಾಜರಿಗೆ ಸಹಮತಿ ಸೂಚಿಸಿತು)

ಅಧ್ಯಕ್ಷರು:– ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್ ಅವರು ದಿನಾಂಕ 30.01.2012 ರಿಂದ ನಡೆಯಲಿರುವ ಅಧಿವೇಶನದ ಸಂದರ್ಭದಲ್ಲಿ ಸದನಕ್ಕೆ ಗೈರು ಹಾಜರಾಗಲು ಅನುಮತಿ ನೀಡಲಾಗಿದೆ.